'ಘಳಿಗೆಗೊಮ್ಮೆ ಏನೋ ಒಂದು ಕವಿತೆಯಂತಹ ಸಾಲು ಉದುರಿಸಿದಂಗಲ್ಲವಾ, ಅದರ ಮೀನಿಂಗು ವಿವರಿಸು' ಎಂದು ಸವಾಲೆಸೆದುಬಿಟ್ಟಳು. ಸುರಿಸುರಿದು ಕುಡಿದಿದ್ದ ಸುರಕುಂಬವೆಲ್ಲ ಕರಗಿಹೋದಂತಾಗಿ ಆ ಹೊತ್ತಿನಲ್ಲಿ ನನ್ನ ತಲೆ ಓಡಲೇ ಇಲ್ಲ. ಮಳೆ ನಿಂತರೂ ಮರದ ಹನಿ ನಿಲ್ಲದು, ಎಂಥಾ ಸರಳ ನುಡಿಗಟ್ಟು. ವಿವರಿಸು ಅನ್ನುತ್ತಾಳೆ. ನನಗೋ ಮಾತುಮರೆತ ರೀತಿ. ಸುಮ್ಮನೆ ಏನೋ ಹೇಳಿದರೆ ಸಾಲದು, ನೆನಪುಳಿಯುವ ನಾಲ್ಕು ಭಾವನೆ ಹೇಳಬೇಕು ಅಂದುಕೊಂಡರೆ, ಒಣಗಿದ ಬಾಯಿಗೆ ಮಳೆಯೇ ಇಲ್ಲ. ನಾಲಕ್ಕಾರು ನಿಮಿಷ ತಡೆದು, ಮೆಲ್ಲಗೆ ಎಣಿಸಿ ಎಣಿಸಿ ಹೇಳಿದೆ. 'ಈಗ ನೋಡವಾ, ಭಾಳಾ ಒಳ್ಳೇ ಸಾಧನೀ ಮಾಡಿದ ಜನಾ ಇರತಾರ ಅನಕೋ. ಅವರು ಒಂದನಮೂನಿ ಮಳೀ ಇದ್ದಂಗ. ಇರೂತನಕಾ ಒಳ್ಳೊಳ್ಳೇ ಕೆಲಸಾ ಎಡಬಿಡದಂಗ ಮಾಡತಾರ. ಒಂದಿವಸ ಸಟ್ಟನ ಸತ್ತು ಹೋದರು ಅಂದ್ರ, ಅವರು ಹೋದ ಮ್ಯಾಲೂ ಅವರನ್ನ, ಅವರು ಮಾಡಿದ ಒಳ್ಳೇ ಕೆಲಸಾನ ಜನಾ ನೆನಸಕೋಂತಾರ. ನನ್ನ ಪ್ರಕಾರ ಅವರ ಜೀವದ ಮಳೀ ನಿಂತರೂ ಸೈತೆ, ಅವರ ಒಳ್ಳೆ ಕೆಲಸದ ನೆನಪಿನ ಹನಿ ನಿಂದರೂದಿಲ್ಲ ನೋಡು' ಅಂದು ನಿಡಿದಾದ ಉಸಿರುಬಿಟ್ಟೆ. ಆಕಿ ಬಟ್ಟಲುಗಣ್ಣು ಬಿಟ್ಟುಕೊಂಡು ನನ್ನನ್ನೇ ನೋಡುತ್ತಿದ್ದಳು. ಕೆಲಕಾಲ ಮಾತೇ ಆಡದಿದ್ದರೂ, ಮಳೆ ನಮ್ಮ ನಡುವಿನ ಒಣತನವನ್ನು ತ್ಯಾವಗೊಳಿಸಿತ್ತು. ಇನ್ನೊಬ್ಬಳು ನನ್ನನ್ನು ಯಾವಾಗಲೂ 'ನೀನೊಬ್ಬಳು ಎಮೋಶನಲ್ ಫೂಲ್' ಎಂದು ಜರಿಯುತ್ತಿದ್ದಳು. ಗದರಿದ ಮರುಕ್ಷಣ ತುಂಬಿ ಕೊಳದಂತಾಗುತ್ತಿದ್ದ ಕಣ್ಣುಗಳನ್ನು ಕನ್ನಡಿಯಲ್ಲಿ ನೋಡಿಕೊಂಡಾಗಲೆಲ್ಲ ನನಗನ್ನಿಸುತ್ತಿದ್ದುದು, ಎಮೋಶನಲ್ ಫೂಲ್ ಅಲ್ಲ, ಪೂಲ್' ಎಂದು. ಭಾವಜಗದ ರಾಯಭಾರಿಯಾದ ಹೆಣ್ಣು ಕಣ್ಣೀರು ತುಳುಕಿಸಿದರೆ ಅದನ್ನು ದೌರ್ಬಲ್ಯ ಎಂದು ಬಗೆಯುವುದನ್ನು ನಾನಂತೂ ಒಪ್ಪಲಾರೆ. ಹಾಗಾಗಿಯೇ ಮಳೆ ನನಗೆ ಹಲವು ಮಾತುಗಳ, ಭಾವನೆಗಳ ಪ್ರತೀಕ. ಪ್ರತಿಬಿಂಬ ಮಾತ್ರವಲ್ಲ ಪರ್ಯಾಯವೂ.

ಹೊಸಪೇಟೆಯಲ್ಲಿ ಬಾಡಿಗೆ ಕೋಣೆ ಹಿಡಿದು ನಾನೂ, ಗೆಳತಿ ಲಲಿತಳೂ ಅಡುಗೆ

